ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ

ESTD-1964 (ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

**ಊಟಿ ರಸ್ತೆ, ಮೈಸೂರು–೫೭೦ ೦೦೪**

☎: 0821-2548236 & 2548380 Fax: 0821-2548238 E-mail: jssautonomous@gmail.com www. jsscacs.edu.in

## ಪ್ರಕಟಣೆಗಾಗಿ

14/02/2013

ಏಷ್ಯಾದ ಅತಿ ದೊಡ್ಡ ವಿಶ್ವವಿದ್ಯಾನಿಲಯ ಎಂಬ ಹಿರಿಮೆಗೆ ಖ್ಯಾತಿಯಾದ **ಬನಾರಸ ಹಿಂದು ವಿಶ್ವವಿದ್ಯಾನಿಲಯದ** ಸಂಸ್ಥಾಪಕ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಪಂಡಿತ **ಮದನ ಮೋಹನ ಮಾಳವೀಯರ 151ನೇ** ಜನ್ಮದಿನದ ಅಂಗವಾಗಿ ರಾಷ್ಟ್ರ ಗೌರವ ಸಂರಕ್ಷಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಟಿ.ಎನ್.ರಾಮಕೃಷ್ಣರವರಿಂದ ವಿಶೇಷ ಉಪನ್ಯಾಸ ಹಾಗೂ ಗುರುದ್ರೋಣಾಚಾರ್ಯ ಸಮ್ಮಾನ ಪ್ರಶಸ್ತಿ ಪುರಸ್ಕೃತರಾದ ಹರಿಹರದ ಆದಿತ್ಯ ಬಿರ್ಲಾ ವಿದ್ಯಾಲಯದ ಚಿತ್ರಕಲಾಶಿಕ್ಷಕರಾದ ಶ್ರೀ ಜಿ.ಜೆ.ಮೆಹೆಂದಳೆಯವರು ಖಾಲಿ ಬಟ್ಟೆಯ ಮೇರೆ ಬರೆದಿರುವ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಪ್ರಾಣಾರ್ಪಣೆ ಮಾಡಿದ ಅನೇಕ ಕ್ರಾಂತಿಕಾರಿಗಳ ಭಾವಚಿತ್ರಗಳ ಪ್ರದರ್ಶನ.

25-12-1861ರಂದು ಜನಿಸಿದ ಮದನ ಮೊಹನ ಮಾಳವೀಯರವರು ವಕೀಲರಾಗಿ ತಮ್ಮ ವೃತ್ತಿ ಆರಂಭಿಸಿ ವಕೀಲ ವೃತ್ತಿಯಲ್ಲಿ ಅತ್ಯಂತ ಉನ್ನತ ನೈತಿಕತೆ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡು ಯಾವುದೇ ಸುಳ್ಳು ಪ್ರಕರಣಗಳು. ಅಪರಾಧಿಗಳ. ಮೋಸಗಾರರ ಮತ್ತು ಸಮಾಜ ದ್ರೋಹಿಗಳ ಯಾವುದೇ ಖಟ್ಲೆಗಳ ಪರವಾಗಿ ವಾದಿಸಲೇ ಇಲ್ಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅನೇಕ ವಿಧದಲ್ಲಿ ಪಾಲ್ಗೊಂಡು ದೇಶ ವಿದೇಶಗಳಲ್ಲಿ ಭಾರತದ ಪರವಾಗಿ ಕಾರ್ಯ ನಿರ್ವಹಿಸಿ ತಮ್ಮ ಅಸಾಧಾರಣ ಪ್ರತಿಭೆಯನ್ನು ಸಾಬೀತು ಪಡಿಸಿದರು.

ಬನಾರಸ ಹಿಂದು ವಿಶ್ವವಿದ್ಯಾನಿಲಯದ ಸಂಸ್ಥಾಪಕರಾದ ಪಂಡಿತ ಮದನ ಮೋಹನ ಮಾಳವೀಯರವರು **ಹಿಂದುಸ್ಥಾನ ಟೈಮ್ಸ್ ಮತ್ತು ದೈನಿಕ ಹಿಂದುಸ್ಥಾನ ಪತ್ರಿಕೆಗಳನ್ನು** ಪ್ರಾರಂಭಿಸಿದರು. ಚಕ್ರಗೋಷ್ಠಿಯಲ್ಲಿ ಭಾರತವನ್ನು ಯಶಸ್ವಿಯಾಗಿ ಪ್ರತಿನಿಧಿಸಿದ ಮಾಳವಿಯರವರು **ಜಲಿಯಾನವಾಲಾಭಾಗ ಘಟನೆಯ** ವಿರುದ್ಧ ಕಣ್ತೆರೆಯುವ ವಾದವನ್ನು ಕೇಂದ್ರ ಶಾಸನ ಸಭೆಯಲ್ಲಿ ಮಂಡಿಸಿದರು. ಅಸಾಧಾರಣ ಸಂಸ್ಕೃತ ವಿದ್ವಾಂಸರಾಗಿದ್ದ ಮಾಳವೀಯರವರು **ಸಾಮಾಜಿಕ ಪರಿವರ್ತನೆಕಾರರಾಗಿಯೂ** ಕೆಲಸ ಮಾಡಿ ಹಿಂದು ಧರ್ಮದಿಂದ ಮತಾಂತರಗೊಂಡವರನ್ನು ಮರಳಿ ಹಿಂದು ಧರ್ಮಕ್ಕೆ ತಂದರು. **1946ರಲ್ಲಿ ಭೀಕರ ನೌಕಾಲಿ ಕೋಮು** ಗಲಭೆಯಿಂದ ಜರ್ಝರಿತರಾದ ಮಾಳವಿಯರವರು ಸರ್ಕಾರ ಸಕಾಲಿಕ ಕ್ರಮಕೈಗೊಳ್ಳದಿದ್ದಾಗ ತೀವ್ರವಾಗಿ ಮಹಾಮನನೊಂದು 12-11-1946ರಂದು ವಿಧಿವಶರಾದರು. ಇಂತಹ ಸ್ವಾತಂತ್ರ್ಯ ಹೋರಾಟಗಾರರನ್ನು ಮುಂದಿನ ಪೀಳಗೆಗೆ ನೆನಪಿನಲ್ಲಿರಿಸುವುದಕ್ಕೋಸ್ಕರ ಜೆ.ಎಸ್.ಎಸ್.ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು ಎಂಬಲ್ಲಿ ವಿಶೇಷ ಉಪನ್ಯಾಸ ಹಾಗೂ ಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ.

ದಿನಾಂಕ 15-02-2013 ಕಾರ್ಯಕ್ರಮದ ಉದ್ಘಾಟನೆ : ಮಧ್ಯಾಹ್ನ : 12:40ಗಂಟೆಗೆ

ಸ್ಥಳ : ಜೆ.ಎಸ್.ಎಸ್.ಕಲಾ.ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು

ಗೆ,
ಸಂಪಾದಕರು

-----------------

-----------------

DCE_MYS_MEETING

ದಿನಪತ್ರಿಕೆ

ಪ್ರಾಂಶುಪಾಲರು
ಜೆ. ಎಸ್. ಎಸ್. ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-570 004